# ಶಾಸ್ತ್ರದ ಕುಣಿಕೆಗೆ ಕತ್ತು ಕೊಟ್ಟ ಸನ್ಯಾಸಿನಿ

## ಅನ್ವಿತಾ

### ಉದಯದ 'ದೊಡ್ಮನೆ ಸೊಸೆ' ಗೀತಾ



★ *ಗಂಗಾ ಕಥೆ ಏನು?*

ದೊಡ್ಮನೆಯ ಮಗಳು ಗೀತಾ. ಆಕೆಗೂ ವಯೋ ಸಹಜ ಬಯಕೆಗಳಿದ್ದರೂ ಅದನ್ನು ಹತ್ತಿಕ್ಕುತ್ತಾಳೆ. ಅವರ ಕುಟುಂಬದಲ್ಲಿ ಹೆಣ್ಣುಮಕ್ಕಳು ಮದುವೆ ಆಗಬಾರದು ಎಂದು ಶಾಸ್ತ್ರದವರು ಹೇಳಿರುತ್ತಾರೆ. ಅನಾದಿಕಾಲದಿಂದ ಅದನ್ನು ಪಾಲಿಸಿಕೊಂಡು ಬಂದಿದ್ದಾರೆ. ನನ್ನ ಅಕ್ಕ ಓಡಿ ಹೋಗಿ ಮದುವೆಯಾಗುತ್ತಾಳೆ. ಅವಳಿಗೆ ಒಂದು ಮಗು ಕೂಡ ಆಗುತ್ತದೆ. ಆದರೆ ನಮ್ಮ ತಾಯಿ ಆ ದಂಪತಿಯನ್ನು ಕೊಲೆ ಮಾಡಿಸಿ ಮಗುವನ್ನು ಎತ್ತಿಕೊಂಡು ಬರುತ್ತಾರೆ. ಆ ಭಯದಿಂದ ನಾನು ಅಮ್ಮ ಹೇಳಿದಂತೆ ಕೇಳುತ್ತೇನೆ. ಇಷ್ಟ ಇಲ್ಲದಿದ್ದರೂ ಸನ್ಯಾಸಿನಿಯಾಗಿದ್ದೇನೆ. ನಮ್ಮ ಸೋದರತ್ತೆ ಕೂಡ ಈಗಲೂ ಮದುವೆಯಾಗದೆ ಇದ್ದಾರೆ. ಸದ್ಯ ನಾನು ಮದುವೆಯಾಗುವ ಸಾಧ್ಯತೆ ಕಡಿಮೆ ಇದ್ದರೂ ಎಲ್ಲೋ ನನ್ನ ಆಶೆಗಳು ಸಾಕಾರಗೊಳ್ಳಬಹುದು ಎನ್ನುವ ಭರವಸೆ ಮನಸ್ಸಿನ ಯಾವುದೋ ಮೂಲೆಯಲ್ಲಿ ಚಿಗುರೊಡೆದಿದೆ.

★ *ನೀವು ಬಣ್ಣದತ್ತ ಹೊರಳಿದ್ದು ಹೇಗೆ?*

ನಮ್ಮದು ಕಲಾ ಕುಟುಂಬ ಅಪ್ಪ ನಾಗೇಂದ್ರ ರಾವ್ ತಬಲಾ ನುಡಿಸುತ್ತಾರೆ. ಅಮ್ಮ ಅರುಣಾ ರಾವ್ ಗಾಯಕಿ. ಮಂಗಳೂರಿನ ಸುರತ್ಕಲ್ ಹತ್ತಿರದ ಕೊಳಾಯಿ ನಮ್ಮ ಊರು. ಬ್ರಾಹ್ಮಣರ ಕುಟುಂಬ ನಮ್ಮದು. ಅಪ್ಪ 'ಕಲೆಯ ಸಹವಾಸ ಬೇಡ ಓದಿ ಏನಾದರೂ ಸಾಧಿಸು' ಎಂದು ತಾಕೀತು ಮಾಡಿದ್ದರು. ಮಡಿ ಮೈಲಿಗೆ ಎನ್ನುವ ಅಂಧಕಾರದ ಪಾಠ ಕಲಿಸಲೇ ಇಲ್ಲ. ನನಗೆ ವಿಜ್ಞಾನ ಓದಲು ಇಷ್ಟ ಇತ್ತು. ಗಣಿತ ಎಂದರೆ ತಲೆನೋವು. ಇದೇ ಕಾರಣಕ್ಕೆ ಬೇಡ ಎಂದರು ನಮ್ಮ ಅಪ್ಪ. ವಾಣಿಜ್ಯದಲ್ಲಿ ಪಿಯು ಮಾಡಿದೆ. ಪದವಿಗೆ ಸೇರುವಾಗ ಬಿಎ ಪತ್ರಿಕೋದ್ಯಮ ಮಾಡು ಎನ್ನುವುದು ಅಪ್ಪನ ಒತ್ತಾಯ. ಅದರಿಂದ ಸಿಕ್ಕಾಪಟ್ಟೆ ಅನುಕೂಲ ಆಯಿತು. ಅದೇ ಸಮಯದಲ್ಲಿ 'ಮಿಸ್ ಮಂಗಳೂರು' ಸ್ಪರ್ಧೆಯಲ್ಲಿ ಭಾಗವಹಿಸಿ ಗುರುತಿಸುವಂತೆ ಆದೆ. ಅದಾದ ಮೇಲೆ ಮಾಡೆಲಿಂಗ್ ಮಾಡುತ್ತಿದ್ದೆ. ಹೀಗಿದ್ದಾಗಲೇ 'ಅಂಬಾರಿ' ಧಾರಾವಾಹಿಯಲ್ಲಿ ಮೊದಲ ಅವಕಾಶ ಸಿಕ್ಕಿತು. ಆದರೆ ಅದು ಕೈಗೂಡಲಿಲ್ಲ. ಇದು ನನ್ನಿಂದ ಆಗದ ಕೆಲಸ ಎಂದು ಸುಮ್ಮನಾದೆ. ಆದರೆ 'ಪ್ಯಾಟಿ ಹುಡುಗಿಯರ ಹಳ್ಳಿ ಲೈಫ್' ಸೀಸನ್ 3 ನನ್ನ ಕೈ ಹಿಡಿಯಿತು.

★ *ನಟನೆಯ ಹಾದಿ ಹೇಗಿತ್ತು? ಈಗ ಹೇಗಿದೆ?*

ರಿಯಾಲಿಟಿ ಶೋ ಮೂಲಕ ಸಿನಿಮಾಕ್ಕೆ ಪ್ರವೇಶ ಮಾಡಿದೆ. 'ಸಿಂಪಲ್ಲಾಗಿ ಲವ್ ಸ್ಟೋರಿ' ಮಾಡಿದೆ. ಅದಾದ ಮೇಲೆ 'ಶಿರಾಡಿ ಘಾಟ್'ನಲ್ಲಿಯೂ ನಟಿಸಿದೆ. ಕ್ಲೈಮ್ಯಾಕ್ಸ್ ಮುಗಿಯುವ ಹೊತ್ತಿಗೆ ಏನೋ ತೊಂದರೆಯಿಂದಾಗಿ ಸಿನಿಮಾ ನಿಂತಿತು. ಈಗ ಹೊಸದಾಗಿ ಚಿತ್ರೀಕರಣ ಮಾಡುತ್ತಿದ್ದಾರೆ. ನನಗೆ ಸಮಯ ಇಲ್ಲದ ಕಾರಣ ನಟಿಸಲು ಒಪ್ಪಲಿಲ್ಲ. ತೆಲುಗಿನಲ್ಲಿ ಒಂದು ಸಿನಿಮಾ ಮಾಡಿದೆ. ತುಳುವಿನಲ್ಲಿ 'ಐಸ್ ಕ್ರೀಂ' ಸಿನಿಮಾ ಮಾಡಿದೆ. ಆಮೇಲೆ ಕಿರುತೆರೆಯ ಯುಗ ಆರಂಭವಾಯಿತು.

'ಅಂಜಲಿ' 'ಒಲವೇ ಜೀವನ ಸಾಕ್ಷಾತ್ಕಾರ' 'ಜನುಮದ ಜೋಡಿ'ಯಲ್ಲಿ ನಟಿಸಿದೆ. ಈಗ ದೊಡ್ಮನೆ ಸೊಸೆಯಲ್ಲಿ ದೊಡ್ಡಮ್ಮನ ಮಗಳಾಗಿದ್ದೇನೆ. ಆಕಸ್ಮಿಕವಾಗಿ ಧ್ವನಿ ದಾನ ಕಲಾವಿದೆಯಾಗಿಯೂ ಗುರುತಿಸಿಕೊಂಡೆ. 'ಸರಯೂ'ವಿನ ಪವಿತ್ರಾ ಪಾತ್ರಕ್ಕೆ ಧ್ವನಿ ನೀಡಿದೆ. ನನ್ನ ಕಂಚಿನ ಕಂಠದ ಬಗ್ಗೆ ನನಗೆ ಒಂದು ರೀತಿಯಲ್ಲಿ ಕೀಳರಿಮೆ ಇತ್ತು. ಅವಕಾಶ ಸಿಕ್ಕ ಮೇಲೆ ನನ್ನ ಧ್ವನಿಗೂ ಎಂತಹ ಮಾನ್ಯತೆ ಇದೆ ಎನ್ನುವುದು ಗೊತ್ತಾಯಿತು.

★ *ತುಂಬಾ ಹುಡುಗರು ಹಿಂದೆ ಬಿದ್ದಿದ್ರಂತೆ ಹೌದಾ?*

ಕಾಲೇಜು ದಿನಗಳಿಂದಲೂ ಬಿಗುಮಾನದ ಹುಡುಗಿ. ತುಂಬಾ ಯುನಿಕ್ ಆಗಿ ಇದ್ದೆ. ಆಗಲೇ ನನಗೆ ಕೊಳಾಯಿ ಬ್ಯೂಟಿ ಎಂದು ಹೇಳುತ್ತಿದ್ದರು. ಕಾಲೇಜಿನಲ್ಲಿಯೂ ಅನ್ವಿತಾ ಹೆಸರಿನ ಮತ್ತೊಬ್ಬ ಹುಡುಗಿ ಇರಲಿಲ್ಲ. ನಾನು ಮಾತ್ರ ನನ್ನ ಪಾಡಿಗೆ ಬೆಳವಣಿಗೆ ಹಾದಿ ಹಿಡಿದು ಬಂದೆ. ನಿಜಕ್ಕೂ ನನಗೆ ಕಾರ್ಪೊರೇಟ್ ಕಂಪೆನಿ ಪಿಆರ್ ಆಗಬೇಕು ಎನ್ನುವ ಆಶೆ ಇತ್ತು. ಬಿಡುವಿಲ್ಲದೆ ಮಾತನಾಡುವ ಸ್ವಭಾವ ನನ್ನದು. ಆದರೆ ಆಕಸ್ಮಿಕವಾಗಿ ನಟನೆಯನ್ನು ಆರಂಭಿಸಿದ್ದೇನೆ.

★ *ಮುಂದಿನ ನಡೆಯ ಬಗ್ಗೆ ಹೇಳುವುದಾದರೆ..*

ಬಹುನಿರೀಕ್ಷೆ ಇಟ್ಟುಕೊಂಡು ಬೆಂಗಳೂರಿಗೆ ಬಂದವಳಿಗೆ ಉದಯ ಅವಕಾಶ ಕೊಟ್ಟಿದೆ. ಹಾಗಾಗಿ ಅದನ್ನು ನಾನು ಎಂದೆಂದಿಗೂ ಸ್ಮರಿಸುತ್ತೇನೆ. ಅದಕ್ಕೆ ನಾನು ಮೊದಲ ಪ್ರಾಶಸ್ತ್ಯವನ್ನು ನೀಡುತ್ತೇನೆ. ಸೃಜನಶೀಲ ಕೆಲಸವೊಂದು ಸಾಧ್ಯವಾಗಿದೆ. ವೈವಿಧ್ಯ ಪಾತ್ರಗಳಲ್ಲಿ ನಟಿಸಬೇಕು ಎನ್ನುವ ಆಶೆಯಿದೆ. ಒಟ್ಟಾರೆ ಚೆನ್ನಾಗಿದ್ದೇನೆ. ಗೌರವವೂ ಇಲ್ಲಿದೆ.

■ ರಾಘವೇಂದ್ರ